ದಿಃ 26-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. **KGP** ವಕೀಲರಿಂದ:

ಯಮನಪ್ಪ ತಂ. ಮಲ್ಲಪ್ಪ ನನ್ನ ತಂದೆ ಇರುತ್ತಾರೆ. ನನಗೆ ಈಗ 57 ವರ್ಷ ಇರುತ್ತದೆ. ನಾನು 2 ನೇ ತರಗತಿವರೆಗೆ ಓದಿರುತ್ತೇನೆ. ನನಗೆ ನನ್ನ ಜನ್ಮ ದಿನಾಂಕ ಹೇಳಲು ಬರುವುದಿಲ್ಲ. ನನ್ನ ತಂದೆ ನಾನು ಹುಟ್ಟುವ ಪೂರ್ವದಲ್ಲಿ ದಾವಾ ಆಸ್ತಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿ ಈಗ ನಿಂಗಪ್ಪ ತಂ. ಸೈಬಣ್ಣ ದನಗರ ಇವರ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದರೆ ಸರಿ. 2008-09 ನೇ ಇಸವಿಯಲ್ಲಿ ನಿಂಗಪ್ಪ ತಂ. ಸೈಬಣ್ಣ ದನಗರ ಇವರ ಹೆಸರಿನಿಂದ 1 ನೇ ಪ್ರತಿವಾದಿ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಸಹಿ ಕೊಟ್ಟಿಲ ಎಂದು ನುಡಿಯುತ್ತಾರೆ. ನಾನು ಈ ದಾವೆಯನ್ನು ಗಾಲಪ್ಪ ಮತ್ತು ಹಣಮಂತ ವಿರುದ್ಧ ಹಾಕಿರುತ್ತೇನೆ. 2 ನೇ ಪ್ರತಿವಾದಿ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. 2015-16 ನೇ ಸಾಲಿನಲ್ಲಿ 1 ನೇ ಪ್ರತಿವಾದಿ ಮಗ ಭೀಮಣ್ಣನ ಹೆಸರಿಗೆ ಆಗಿರುತ್ತದೆ ಎಂದರೆ

ಸರಿ. 1 ನೇ ಪ್ರತಿವಾದಿಯವರಿಗೆ ದನಗರ ಮತ್ತು ಮುತ್ತಪ್ಪಗೋಳ ಅಂತ ಅಡ್ಡ ಹೆಸರಿನಿಂದ ಕರೆಯುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮಗ ಹೆಸರಿನಲ್ಲಿ ದಾವಾ ಆಸ್ತಿ ಇದ್ದು ಆತನಿಗೆ ಪಕ್ಷಗಾರನಾಗಿ ಮಾಡಿಲ್ಲ ಎಂದರೆ ಸರಿ. 1973-74 ನೇ ಸಾಲಿನಲ್ಲಿ ಯಮನಪ್ಪ ತಂ. ಮಲ್ಲಪ್ಪ ಈತನ ಹೆಸರಿನಿಂದ 5 ಎಕರೆ ಜಮೀನು ಸ.ನಂ. 70/5 ರಲ್ಲಿ ಇತ್ತು ಎಂದರೆ ಸರಿ.

(ಈ ಸಮಯದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದರಿಂದ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ